# ನಿಜದ ಪೂಜೆ

ಆಚಾರ್ಯ ಶಂಕರರ ಒಂದು ಹಾಡು ಹೀಗಿದೆ: ಜಪೋಜಲ್ಪಃ ಶಿಲ್ಪಂಸಕಲಮಪಿ ಮುದ್ರಾವಿರಚನಾ/ ಗತಿಃ ಪ್ರಾದಕ್ಷಿಣ್ಯಕ್ರಮಣಂ ಅಶನಾದ್ಯಾಹುತಿ ವಿಧಿಃ// ಪ್ರಣಾಮಃ ಸಂವೇಶಃ ಸುಖಮಖಿಲಮಾತ್ಮಾರ್ಪಣದೃಶಾ/ ಸಪರ್ಯಾಪರ್ಯಾಯಃ ತವಭವತು ಯನ್ಮೇ ವಿಲಸಿತಮ್ //

ಇದರರ್ಥ: ಮಾತೆಲ್ಲ ಜಪ ಕೈಯ ಚೇಷ್ಟೆಗಳೆಲ್ಲ ಮುದ್ರೆ. ನಡೆದಾಡಿದ್ದೆ ಪ್ರದಕ್ಷಿಣೆ ಉಂಡದ್ದು ಪ್ರಾಣಾಹುತಿ. ಹೊರಳಿ ಉರುಳಿದ್ದೆಲ್ಲ ದಂಡ ಪ್ರಣಾಮವೆನೆ. ಪಟ್ಟ ಸುಖವೆಲ್ಲವೂ ನಿನಗೆ ಮೀಸಲು ಎಂಬ ನನ್ನಲ್ಲಿ ನಡೆವುದೇನೆಲ್ಲವೂ ತಾಯೆ; ನಿನ್ನ ಪೂಜೆಯಿನ್ನೊಂದು ಬಗೆಯಾಗಲಿ.

ಮಾತೆಲ್ಲ ಜಪ ಎಂದು ಮೊದಲಾಗುತ್ತದೆ ಹಾಡು. ನಾವು ಮಾತು ಕೇಳದೆ ಮಾತು ಆಡಲಾರೆವು ಕೇಳುಗರಾಗದೆ ವಕ್ತಾರರಾಗಲಾರೆವು ಇದು ಪ್ರಕೃತಿಯ ಮೂಲಭೂತ ನಿಯಮ ಎಂಬಂತಿದೆ.

ಈ ಅಂಶವನ್ನೇ ತುಸು ಬೆಳೆಸಿದರೆ, ನಾವೇನು ಕೇಳಿದೆವು ಅದನ್ನೇ ಹಳುವವರಾಗುವೆವು. ನಾವು ಕೇಳಿದ್ದನ್ನೇ ಹೇಳುವುದೆನ್ನುವುದೂ ನಿಜ. ಕೇಳಿದ್ದನ್ನೇ ಇನ್ನೊಂದು ರೀತಿಯಲ್ಲಿ ತುಸು ಬದಲಿಸಿ ಹೇಳುವುದೆನ್ನುವುದೂ ನಿಜ. ಕೇಳಿದ್ದನ್ನು ಪ್ರಶ್ನಿಸಿಕೊಳ್ಳುತ್ತ, ಪರಿಷ್ಕರಿಸಿಕೊಳ್ಳುತ್ತ, ಈ ಯತ್ನದಲ್ಲಿ ಅದನ್ನು ಹೊಸದಾಗಿಸುತ್ತ ಹೇಳುವುದೆನ್ನುವುದೂ ನಿಜ. ಹೇಳುವ ನೂರು ಬಗೆಗಳೆಲ್ಲವೂ ಕೇಳುವ ನೂರು ಬಗೆಗಳಾಗಿರುವುದೂ ನಿಜ. ಅಂದರೆ, ಪದಗಳನ್ನು ಕೇಳುತ್ತಿರುವಾಗಲೇ, ಅದೊಂದು ಬಗೆಯ ಕೌಶಲದಿಂದ ಕೇಳುತ್ತಿದ್ದರೆ, ಹೇಳಿದ್ದನ್ನು ಮಾತ್ರವಲ್ಲ ಹೇಳದೆ ಇದ್ದುದನ್ನೂ ಕೇಳುವುದು ಕೂಡ ಸಾಧ್ಯ. ಇದೂ ನಿಜ. ಏಕೆಂದರೆ ಹೇಳುತ್ತಿರುವುದರಲ್ಲಿ ಹೇಳದೆ ಇರುವಂಥದು ಕೂಡ ಸೇರಿಕೊಂಡಿರುತ್ತದೆ. ಶಬ್ದದೊಳಗಣ ನಿಃಶಬ್ದದಂತೆ ಎಂದು ಅದ್ಭುತವಾಗಿ ಹೇಳುತ್ತಾನೆ ಅಲ್ಲಮ.

ಶಬ್ದದೊಳಗಣ ನಿಃಶಬ್ದವನ್ನು ಕೇಳಿದವನು ಮಾತು ಆಡುವುದಾದರೆ ಅವನ ಮಾತಿನಲ್ಲಿಯೂ ನಿಃಶಬ್ದವು ಸೇರಿಹೋಗಿರುತ್ತದೆ. ಮತ್ತು ಹಾಗೆ ಸೇರಿರುವುದರಿಂದಲೇ ಅವನಾಡುವ ಮಾತು ಹೊಸ ಜೀವಂತಿಕೆಯಲ್ಲಿ ಮಿಡಿಯುತ್ತಿರುತ್ತದೆ. ಹೊಸ ಅರ್ಥ ಸ್ಫುರಣಗಳನ್ನು ಉಂಟುಮಾಡುತ್ತಿರುತ್ತದೆ.

ಈ ಇಡೀ ಪ್ರಕ್ರಿಯೆಯನ್ನು ಇನ್ನೊಂದು ರೀತಿಯಲ್ಲಿ, ತಂತ್ರದ ಉಪಾಸನೆಯ ದೃಷ್ಟಿಯಿಂದ ನೋಡುವುದಾದರೆ, ತಾನು ಕೇಳಿದ ಮಾತನ್ನೇ ತಾನು ಹೇಳುವುದಾದುದರಿಂದ, ತನಗೆ ಮಾತನ್ನು ಕಲಿಸಿದವನೇ ತನ್ನ ಮಾತಿನ ಕೇಳುಗನೂ ಆಗಿದ್ದಾನೆ ಎನ್ನುವ ಅಪೂರ್ವ ಅನುಸಂಧಾನವೊಂದು ಅರಳಿಕೊಳ್ಳುತ್ತದೆ. ನನಗೆ ಮಾತು ಕಲಿಸಿ, ಅವನು ಕಲಿಸಿದ ಮಾತನ್ನು ನಾನು ತೊದಲು ನುಡಿಯಲ್ಲಿ ಮರುನುಡಿಯುವಾಗ ಅದನ್ನೊಂದು ರಸಾನುಭವವೆನ್ನುವಂತೆ ನನ್ನ ವಿಠ್ಠಲ ಕೇಳುತ್ತಿದ್ದಾನೆ ಎಂದು ತುಕಾರಾಮ ತನ್ನ ಅಭಂಗವೊಂದರಲ್ಲಿ ಹೇಳಿದ್ದುಂಟು.

ಏನಾಯಿತೆಂದರೆ ದೇವರು ಕೇಳುಗನಾದ! ಈ ಹಾಡಿನ ಸಂದರ್ಭದಲ್ಲಿ ವಾಗ್‌ದೇಹಿಯೂ, ವಾಗ್‌ದೇವಿಯೂ ಆಗಿರುವ ತಾಯಿಯೇ ಕೇಳುಗಳಾದಳು; ದೇವರು ಕೇಳುಗನಾದಾಗ; ದೇವಿ ಕೇಳುಗಳಾದಾಗ, ಕೇಳುವ ಮಾತುಗಳೆಲ್ಲ ಜಪವೇ ಅಲ್ಲವೆ! ದೇವರು ಕೇಳುವುದಕ್ಕೆ ಯೋಗ್ಯವಾದ ಮಾತು; ಅದನ್ನು ದೇವರು ಕೇಳಿಸಿಕೊಂಡು ಮಾತೆಲ್ಲ ಜಪವಾಯಿತು. ದೇವರು ನಮ್ಮ ಮಾತನ್ನೆಲ್ಲ ಕೇಳುತ್ತಾನೆಂದಾಗ, ಆ ಅನುಸಂಧಾನದಲ್ಲಿ, ಮಾತೆಲ್ಲ ಜಪ!

ಈ ಅನುಸಂಧಾನವಿಲ್ಲದಿದ್ದರೆ ಎಲ್ಲವೂ ಜಲ್ಪ. ಜಪವೂ ಜಲ್ಪ. ಜಲ್ಪವೆಂದರೆ ಒಣ ಹರಟೆ. ಹಾಡು ಮುಂದುವರಿದಂತೆ ಕವಿ, ನಾಮದಿಂದ ಪ್ರಾರಂಭಿಸಿ ರೂಪಕ್ಕೆ ಬಂದಿದ್ದಾರೆ. ಶಿಲ್ಪ, ಗತಿ, ಸಂವೇಶ ಇವೆಲ್ಲ ಮೈಗೆ ಆಕಾರಕ್ಕೆ ರೂಪಕ್ಕೆ ಸಂಬಂಧಿಸಿದವು. ಯಾರು ಹೇಳಿದರು ಮಾತಿಗೆ ಮಾತ್ರ ನೆನಪಿರುವುದೆಂದು? ಮೈಗೆ ನೆನಪಿಲ್ಲವೇನು? ನೆನಪೆಂಬ ಭಾವದ ಅಚ್ಚು ಪಡಿಮೂಡಿರುವ ಕ್ಷೇತ್ರವಲ್ಲವೇನು ಮೈ ಎಂದರೆ? ಯದ್ ವೈ ಶಿಲ್ಪಂ ತದ್ ಪ್ರತಿರೂಪಂ ಇದು ವೇದದ ಮಾತು. ಮೈಯ ನಿಜ, ಮನದ ನಿಜ ಬೇರೆ ಬೇರೆಯೇನು? ಅವು ಒಂದೇ ಅಲ್ಲವೇನು? ಶಿಲ್ಪವೆಂದರೆ ಹಸ್ತ ವಿನ್ಯಾಸ. ಕರ–ಣ. ಕೈಯ ಚೇಷ್ಟೆ, ಮಾತಿನ ಜತೆ ಯಾದೃಚ್ಛಿಕವಾಗಿ ಕೈ ಅನುವರ್ತಿಸುತ್ತೆ. ಮಾತು ಜಪವಾಗುವಾಗ ಕೈ–ಕರಣಗಳೆಲ್ಲ ಮುದ್ರೆಯಾಗದೆ ಇರುವುದು ಹೇಗೆ? ಗತಿ ಎಂದರೆ ಪಾದವಿಕ್ಷೇಪ. ನಡೆದಾಡುವಿಕೆ. ನಡೆದದ್ದೆಲ್ಲ ತಾಯಿಗೆ ಪ್ರದಕ್ಷಿಣೆಯೇ. ತಾಯ ಸೆರಗ ಹಿಡಿದ ಕಂದ ದಾರಿಯುದ್ದಕ್ಕೂ ಎಂದು ಕವಿ ಹೇಳಿದಂತೆ.

ಸಂವೇಶ ಎಂದರೆ ಶಯ್ಯಾಸನ. ಕೆಳಮೊಗವಾಗಿ ಮಲಗಿರುವುದು ಕಾಮ ಶಯ್ಯೆಯ ಒಂದು ಭಂಗಿ ಕೂಡ. ಇದನ್ನು ಪ್ರಣಾಮ ಎಂದು ಆಚಾರ್ಯರು. ಪ್ರಣಾಮಃ ಸಂವೇಶಃ ಅನುಸಂಧಾನದ ಬಲದಿಂದ ಇಲ್ಲಿನ ಇಹದ ಅನುಭವಗಳಾವುವೂ ಕೆಡದೆ, ಹೊಸ ಹುಟ್ಟು; ಹೊಸ ಜೀವ ಪಡೆಯುತ್ತದೆನ್ನುವುದಕ್ಕೆ ಈ ಮಾತು ಉಜ್ವಲವಾದ ಸಾಕ್ಷಿಯಾಗಿದೆ. ಪ್ರಣಾಮಃ ಸಂವೇಶಃ ಆಚಾರ್ಯರು ಇನ್ನೊಂದು ಮಾತು ಹೇಳಿದರು ಅಶನಾದ್ಯಾಹುತಿ ವಿಧಿಃ ತಾನು ಉಣ್ಣುವುದೆಲ್ಲ ತಾಯಿಗೆ ಅರ್ಪಿಸುವ ಆಹುತಿ!

ಉಪನಿಷತ್ತು ಹೇಳಿತ್ತು: ಭಗವಂತ ಕೊಟ್ಟುದನುಣ್ಣು. ಇದು ವಿವೇಕ ಮತ್ತು ನಿರ್ದೇಶನ. ನಾನು ಉಣ್ಣುವುದೆಲ್ಲ ಭಗವಂತ ಕೊಟ್ಟುದೇ ಎನ್ನುವುದು ಮುಂದಿನ ಹಂತ. ನಾನು ಉಂಡ ಅನುಭವವೆಲ್ಲ ಭಗವಂತನದೇ ಎನ್ನುವುದು ಅನುಭವದ ಕೊನೆ. ಅದು ಅನುಭವದ ಅರ್ಪಣೆ ಕೂಡ!

ಹಾಡಿನ ಕೊನೆಯಲ್ಲಿ ಅನುಭವದ ಕೊನೆಯ ಹಂತವನ್ನು ಹೇಳುತ್ತಾರೆ. ನಾನು ಭೋಕ್ತ್ರ ಅಲ್ಲ; ಭೋಗಿಸುವವನಲ್ಲ. ಇಂದ್ರಿಯಗಳು ಏನು ಸುಖ ಉಣ್ಣುತ್ತಿವೆ ಅವೆಲ್ಲ ನಿನ್ನದು, ನಿನಗೆ ಸೇರಿದ್ದು ಎನ್ನುತ್ತೇನೆ. ಇದು ಆತ್ಮಾರ್ಪಣ. ಭೋಕ್ತೃತ್ತ್ವವನ್ನು ಕಳೆದುಕೊಳ್ಳುವುದೇ ಕರ್ತೃತ್ವವನ್ನು ಕಳೆದುಕೊಳ್ಳುವುದಕ್ಕಿರುವ ಒಂದೇ ದಾರಿ. ನೀನು ಕರ್ತಾ. ಈ ಸೃಷ್ಟಿಯ ಕರ್ತಾ. ನಾನಲ್ಲ. ಆದುದರಿಂದ ಭೋಕ್ತೃತ್ವವೂ ನಿನ್ನದೇ ಆಗಿರಬೇಕು. ಯಾರು ಉಂಟುಮಾಡಿದವನೋ ಅವನೇ ಉಣ್ಣುವವನು! ಉಣ್ಣುವವನಾಗಬೇಕು! ಭೋಗದ ರುಚಿಯನ್ನು ಅನುಭವಿಸಬೇಕೆಂಬ ಹಂಬಲದಿಂದ ನಾನು ಭೋಕ್ತಾ ಎನ್ನುತ್ತಿದ್ದೆ. ಈಗ ತಿಳುವಳಿಕೆ ಬಂದಂತಿದೆ. ನನ್ನ ಹಂಬಲವನ್ನೇ ನಾನು ಉಣ್ಣುತ್ತಿದ್ದುದಲ್ಲದೆ ನಿಜವಾದ ಭೋಗ ಅದು ನಿನ್ನದೇ. ಮತ್ತು ಹೀಗೆ ಒಪ್ಪಿಸುವುದೇ ನಿಜವಾದ ಪೂಜೆ! ಸಪರ್ಯಾ ಎಂದರೆ ಪೂಜೆ. ಅರ್ಚನೆ. ಪರ್ಯಾಯ ಎಂದರೆ ಇನ್ನೊಂದು ಬಗೆ. ಅಥವಾ ಬದಲಿ. ಈ ಇನ್ನೊಂದು ಬಗೆಯ ಪೂಜೆ – ನಿಜವಾದ್ದು. ಪೂಜೆ ಎಂದು ಪ್ರತ್ಯೇಕಿಸಿ ಆಡಂಬರದಿಂದ, ಜನರನ್ನು ಬೆರಗುಗೊಳಿಸಲು ಮಾಡುವ ಪೂಜೆ ನಿಜವಲ್ಲ. ಬದುಕೇ ಪೂಜೆ. ತನ್ನ ನಿತ್ಯದ ಅನುಭವ ಎಂದು ಇದುವರೆಗೆ ತಿಳಿದುದು ನಿಜಕ್ಕೂ ಭಗವಂತನ ಅನುಭವವೂ ಹೌದು ಎಂದು ತನಗೆ ತಾನೇ ಬೆರಗಾಗುವುದೇ ನಿಜದ ಪೂಜೆ.

■ **ತೋಷ**

## ಮಾತೇ ಮುತ್ತು

★ ಅಸೂಯೆ ಎನ್ನುವುದು ಆತ್ಮಕ್ಕೆ ಅಂಟಿದ ಹುಣ್ಣು.

-ಸಾಕ್ರೆಟಿಸ್

★ ಸಣ್ಣ ಪುಟ್ಟ ವಿಷಯಗಳಿಗೆಲ್ಲ ದೊಡ್ಡ ದೊಡ್ಡ ಶಬ್ದಗಳನ್ನು ಬಳಸಬೇಡಿ.

-ಸ್ಯಾಮುವೆಲ್ ಜಾನ್ಸನ್

★ ಉಳಿದುಕೊಳ್ಳಬಯಸುವ ಅತಿಥಿಯನ್ನು ಹೋಗಲು ಅವಸರಿಸಬೇಡಿ. ಹೋಗಲು ಬಯಸುವವರನ್ನು ಉಳಿಯಲು ಒತ್ತಾಯಿಸಬೇಡಿ.

-ಹೋಮರ್

★ ಕೇವಲ ಯಶೋಗಾಥೆಗಳನ್ನು ಓದಬೇಡಿ, ನಿಮಗೆ ಸಂದೇಶಗಳು ಮಾತ್ರ ಸಿಗುತ್ತವೆ. ವೈಫಲ್ಯದ ಅನುಭವಗಳನ್ನು ಓದಿ, ಯಶಸ್ಸು ಹೊಂದಲು ದಾರಿಗಳು ಹೊಳೆಯುತ್ತವೆ.

—ಎ.ಪಿ.ಜೆ.ಕಲಾಂ

★ ಬಾಗಿಲು ಬಡಿಯುವವರನ್ನು ಸ್ವಾಗತಿಸಲು ದೇವರು ಸತ್ಯಕ್ಕೆ ಹಲವು ಬಾಗಿಲುಗಳನ್ನು ಸೃಷ್ಟಿಸಿದ್ದಾನೆ.

-ಖಲೀಲ್ ಗಿಬ್ರಾನ್

★ ಹಳೆಯ ದುಃಖಗಳಿಗೆ ಹೊಸ ಕಣ್ಣೀರನ್ನು ವ್ಯರ್ಥ ಮಾಡಬೇಡಿ.

-ಯೂರಿಪಿಡೀಸ್

★ ಪ್ರಾಮಾಣಿಕ ಭಿನ್ನಮತಗಳು ಎಷ್ಟೋ ಸಲ ಪ್ರಗತಿಯ ಆರೋಗ್ಯಕರ ಚಿನ್ಹೆಗಳು.

-ಮಹಾತ್ಮ ಗಾಂಧಿ

★ ಜೀವನಕ್ಕಿಂತ ಸಂಬಂಧಗಳು ಮುಖ್ಯ. ಆದರೆ ಆ ಸಂಬಂಧಗಳಲ್ಲೂ ಜೀವ ಇರಬೇಕು.

—ಸ್ವಾಮಿ ವಿವೇಕಾನಂದ